ಕೈಪಿಡಿಯನ್ನು ಸಿದ್ಧಪಡಿಸಿ ಅದನ್ನು **National Regulation Code** ಎಂಬ ಕಾನೂನಿನಡಿಯಲ್ಲಿ ತರಲು ಆಸಕ್ತಿ ತೋರುತ್ತಿದೆ. ಅದರ ಪ್ರಕಾರ ದೇಶದಲ್ಲಿರುವ ಎಲ್ಲ ಉತ್ಪಾದನಾ ವಲಯದ ಕಾರ್ಖಾನೆಗಳು ಹೊರಸೂಸುತ್ತಿರುವ ಮಾಲಿನ್ಯದ ಪರಿಶೀಲನೆ ನಡೆಸಿ, ಪ್ರತೀ ವಲಯಕ್ಕೂ ಇಷ್ಟುಮಾತ್ರ ಮಾಲಿನ್ಯ ಹೊರಸೂಸಬಹುದೆಂಬ ಮಿತಿ ಹಾಕುವುದರಲ್ಲಿದೆ. ಅದಕ್ಕಾಗಿ ಹೊರದೇಶದ ವಿಜ್ಞಾನಿಗಳನ್ನೂ ಒಳಗೊಂಡ ಒಂದು ಸಮಿತಿಯನ್ನು ರಚಿಸಿದೆ. ಅವರು ಆ ಕುರಿತು ಅಧ್ಯಯನ ನಡೆಸುತ್ತಿದ್ದಾರೆ. ಮೋ ಕೆಲಸ ಮಾಡುತ್ತಿರುವ ಕಂಪೆನಿ ಆಟೋಮೋಬೈಲ್ ಎಂಜಿನ್ನಿನ ಬಿಡಿ ಭಾಗಗಳನ್ನು ತಯಾರಿಸುತ್ತದೆ. ಎಂಜಿನ್ನಿನ ಮುಖ್ಯ ಅಂಗವಾದ ಕಂಬಸ್ಟಿಬಲ್ ಟ್ಯೂಬ್ ತಯಾರಿಕೆಯಲ್ಲಿ ಅದು ಜಗತ್ತಿನಲ್ಲಿಯೇ ಪ್ರಖ್ಯಾತ. ಅದು ಹವಾಮಾನಕ್ಕೆ ಸೂಸುವ ಇಂಗಾಲದ ಡೈಆಕ್ಸೈಡ್ ಪ್ರಮಾಣ ಅಪಾರ. ಹೀಗಾಗಿ, ಅವನ ಕಂಪೆನಿಯವರು ಹೇಗಾದರೂ ಮಾಡಿ ಸಮಿತಿಯಲ್ಲಿರುವ ವಿಜ್ಞಾನಿಗಳಿಗೆ ಲಂಚ ಕೊಟ್ಟು **CO2** ವಿನ ಹೊರಸೂಸುವಿಕೆ ಮಿತಿಯ ಒಳಗೇ ಇದೆ ಎಂದು ಸರ್ಟಿಫಿಕೇಟ್ ಪಡೆಯುವುದಕ್ಕಾಗಿ ಉನ್ನತ ಮಟ್ಟದ ಲಾಬಿ ನಡೆಸುತ್ತಿದ್ದಾರೆ. ಈ ಎಲ್ಲ ಲಾಬಿಗಳ ಒಂದು ಹಂತದ ಕೋಆರ್ಡಿನೇಷನ್ ನೋಡಿಕೊಳ್ಳುವವ ಈತನೇ. ಬಹಳೇ ರಿಸ್ಕಿನ, ಮಿಲಿಯನ್‌ಗಟ್ಟಲೇ ಡಾಲರ್‌ಗಳ ವ್ಯವಹಾರ ಎಂಬುದಾಗಿ ತಿಳಿಸಿದ. ಒಂದು ವೇಳೆ ಖೋಟಾ ಪ್ರಮಾಣ ಪತ್ರ ಪಡೆಯುವಲ್ಲಿ ಕಂಪೆನಿ ಸಫಲವಾಗದೇ ಹೋದಲ್ಲಿ ಅವರು ಏಷ್ಯಾದ ಕೆಲ ದೇಶಗಳಲ್ಲಿ ಕಾರ್ಖಾನೆ ಸ್ಥಾಪಿಸುವ ತಯಾರಿಯಲ್ಲಿದ್ದಾರೆ. ಭಾರತ ಅವರ ಪ್ರಥಮ ಆಯ್ಕೆ. ಹೇಗೂ ಅವರ ಕಂಪೆನಿಯ ಶೇಕಡಾ ನಲವತ್ತಕ್ಕೂ ಹೆಚ್ಚು ಸೇಲ್ಸ್ ಟರ್ನ್‌ಓವರ್ ಆಗುವುದು ಇಲ್ಲಿಯೇ. ಅದನ್ನು ಮುಂದಿನ ಎರಡು ವರ್ಷಗಳಲ್ಲಿ ಕನಿಷ್ಠ ಇಪ್ಪತ್ತು ಪರ್ಸಂಟಾದರೂ ಹೆಚ್ಚಿಸಬೇಕೆನ್ನುವುದು ಅವರ ಬಿಸನೆಸ್ ಪ್ಲಾನ್. ಫ್ಯಾಕ್ಟರಿಗೆ ಬೆಂಗಳೂರೇ ಪ್ರಶಸ್ತವೆಂದು ಆಯ್ಕೆ ಮಾಡಿ ಅದಕ್ಕೆ ಬೇಕಾದ ಪೂರ್ವ ತಯಾರಿಯೆಲ್ಲಾ ನಡೆಯುತ್ತಿದೆ. ಆ ಕಾರಣದಿಂದಲೇ ಆತ ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡುವುದು ಹೆಚ್ಚಾಗಿದೆ... ಇತ್ಯಾದಿ. ಎಂತೆಂಥಾ ವ್ಯವಹಾರಗಳನ್ನೆಲ್ಲ ನಡೆಸುತ್ತಾನೆ ಈತ ಎಂದು ನಾನು ದಂಗಾದೆ. ಅವರು ಏನಾದರೂ ಮಾಡಿಕೊಂಡು ಸಾಯಲಿ, ಬೆಂಗಳೂರಿನಲ್ಲೇನಾದರೂ ಆ ಕಾರ್ಖಾನೆ ಬಂದರೆ ಈತನ ವಶೀಲಿಯಿಂದಾಗಿ ನನಗೊಂದು ಒಳ್ಳೇ ನೌಕರಿ ಸಿಕ್ಕರೆ ಸಾಕೆಂದು ನಾನು ಮನದಲ್ಲೇ ಮಂಡಿಗೆ ತಿಂದೆ.

ಅಂದಹಾಗೆ, ಈತ ನನ್ನನ್ನೇಕೆ ಇಷ್ಟು ಹಚ್ಚಿಕೊಂಡಿದ್ದಾನೆ ಎಂಬುದು ನಿಜಕ್ಕೂ ಅರ್ಥವಾಗದ ಸಂಗತಿ. ಹಾಗೆ ನೋಡಿದರೆ ನನಗೂ ಅವನಿಗೂ ಯಾವುದೇ ಸಾಮ್ಯತೆಯೂ ಇಲ್ಲ. ಅಂತಸ್ತು ಹಾಗಿರಲಿ, ಉಳಿದಾವುದೇ ವಿಷಯದಲ್ಲೂ ನಾನವನಿಗೆ ತಕ್ಕವನೇ ಅಲ್ಲ. ನನ್ನಿಂದ ಆತನಿಗೆ ಬಿಡಿಕಾಸಿನ ಲಾಭವೂ ಇಲ್ಲ. ಆದರೂ ಯಾಕೆ ಆತ ನನ್ನ ಹಿಂದೆ ಬಿದ್ದಿದ್ದಾನೆ ಎಂಬುದು ನನಗೆ ಒಗಟೇ. ಇವನು ನಾನಂದುಕೊಂಡ ಮೋಹನಕುಮಾರ ಹೌದೋ ಅಲ್ಲವೋ ಅಥವಾ ನಾನ್ಯರೋ ಬೇರೆಯವನೆಂದು ಆತ ಕನ್‌ಫ್ಯೂಸ್ ಮಾಡಿಕೊಂಡಿದ್ದಾನೋ ಹೇಗೆ, ಎಂದು ನನಗೆ ಆಗಾಗ ಅನ್ನಿಸುವುದು ಸುಳ್ಳಲ್ಲ. ಬಾಲ್ಯದ ಬಗ್ಗೆ ಅವನು ಹೆಚ್ಚು ಮಾತನಾಡದಿರುವುದೂ ಆ ಅನುಮಾನಕ್ಕೆ ಕಾರಣವಿರಬಹುದು. ಅದೇನೇ ಇರಲಿ ಆತನ ಸಾಂಗತ್ಯದಿಂದಾಗಿ ನನ್ನ ಜೀವನದಲ್ಲಿ ಒಂದು ಮಟ್ಟಿನ ಏರಿಕೆಯಾಗಿರುವುದಂತೂ ನಿಜ. ಒಮ್ಮೆ ಅವನನ್ನು ಭೇಟಿಮಾಡಿ ವಾಪಸ್ಸು ಬರುತ್ತಿರುವಾಗ ದಾರಿಯಲ್ಲಿ ಯವುದೋ ಸಣ್ಣ ಕಾರಣಕ್ಕೆ ಬೆಂರ್ಝ್